**ದಿನಾಂಕ 18-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ತಾಯಿಗೆ flat ಗಳನ್ನು ಮಾರಾಟ ಮಾಡಿದಾಗ ಕಡಿಮೆ ಆದಾಯ ಬಂದಿದ್ದು ನಾನು ಹೇಳುವ ರೀತಿ ಕೋಟಿಗಟ್ಟಲೇ ಆದಾಯ ಬಂದಿಲ್ಲ ಎಂದರೆ ಸರಿಯಲ್ಲ. ಕೆಲವೊಂದು flat ಗಳನ್ನು ಸಂಪೂರ್ಣ ಪೂರ್ಣಗೊಳಿಸದೇ ಅರ್ಧಕ್ಕೆ ಕಟ್ಟಿ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ Stamp Duty ಕಡಿಮೆ ಮಾಡಲು ಆ ರೀತಿ ಕಾಣಿಸಿದ್ದಾರೆ ಎಂದು ತಿಳಿಸಿರುತ್ತಾರೆ. ಕಟ್ಟಡ ಪೂರ್ಣಗೊಂಡಿದ್ದರೂ ಕೂಡ ಅರ್ಧ ಆಗಿದೆ ಎಂದು ತೋರಿಸಿದ ಬಗ್ಗೆ ಪುರಸಭೆಗಾಗಲೀ ಅಥವಾ ಆದಾಯ ತೆರಿಗೆ ಇಲಾಖೆಗಾಗಲೀ ನಾನು ದೂರು ಕೊಟ್ಟಿಲ್ಲ. ಸಂಪೂರ್ಣಗೊಳ್ಳದ flat ಗಳಿಗೆ ಡೋರ್ ನಂಬರ್ ಮತ್ತು Completion Certificate ಕೊಟ್ಟಿಲ್ಲ ಎಂದರೆ ಸಾಕ್ಷಿ Stamp Duty ಕಡಿಮೆ ಮಾಡಲು ಮಾಡುವ ಕ್ರಮವೇ ಆ ರೀತಿ ಎಂದು ತಿಳಿಸಿರುತ್ತಾರೆ . ಕಟ್ಟಡ ಪೂರ್ಣಗೊಂಡ ಬಗ್ಗೆ Completion Certificate ಬಂದಿತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಮೇಲೆ ತೆಗೆದುಕೊಳ್ಳುವುದು ಎಂದು ತಿಳಿಸಿರುತ್ತಾರೆ. ನನ್ನ ತಾಯಿ ಮೃತಪಡುವಾಗ ನನ್ನ ತಾಯಿಯ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನ್ನ ಅಣ್ಣ ಒಂದನೇ ಪ್ರತಿವಾದಿಗೆ ಗೊತ್ತು ನನಗೆ ಗೊತ್ತಿಲ್ಲ . ನಿಮ್ಮ ತಾಯಿಯ ಹತ್ತಿರ ಅವರ ಬಳಿ ಎಷ್ಟು ಹಣ ಇದೆ ಎಂದು ಕೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿಗೆ Artemis ಖಾಯಿಲೆ ಇತ್ತು. ಆದ್ದರಿಂದ ಕೇಳಲಿಲ್ಲ ಎಂದು ತಿಳಿಸಿರುತ್ತಾರೆ. ನಿಪಿ 51 ದಾಖಲೆ ಮುಖೇನ ಬಂದ ಹಣ ಹಾಗೂ 2 ನೇ ಪ್ರತಿವಾದಿಯಾದ ನನ್ನ ತಮ್ಮ ಮಾರಾಟ ಮಾಡಿದ ಅಂದರೆ ನಿಡಿ7 ಮತ್ತು 8 ರ ದಾಖಲೆಗಳ ಅಡಿಯಲ್ಲಿ ಬಂದ ಹಣ ಯಾವ ಖಾತೆಗೆ ಜಮೆ ಆಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ

ಪ್ರತಿಯಾದ ನನ್ನ ಅಣ್ಣನನ್ನೇ ಕೇಳಬೇಕು ಆತನೇ ಎಲ್ಲವನ್ನು ನೋಡಿಕೊಳ್ಳುತಿದ್ದ ಎಂದು ತಿಳಿಸಿರುತ್ತಾರೆ. ಯಾವುದೇ ಆದಾರ ಇಲ್ಲದೇ ವಿನಾಕಾರಣ ನನ್ನ ತಾಯಿಗೆ ಸೇರಿದ ಪ್ಲಾಟ್ ಗಳನ್ನು ಮಾರಾಟ ಮಾಡಿದ ಹಣವನ್ನು ಸ್ವತ್ತುಗಳನ್ನು ಖರೀದಿಸಲು ಉಪಯೋಗಿಸಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ 80 ಬಡಗುಬೆಟ್ಟು ಗ್ರಾಮದ ದಶರಥ ನಗರದ ಆಸ್ತಿಯನ್ನು ಕ್ರಿಶ್ಚಿಯನ್ ಜನಾಂಗಕ್ಕೆ ಸೇರಿದ ವ್ಯಕ್ತಿಯಿಂದ 1999-2000 ರಲ್ಲಿ ಖರೀದಿಸಿರುತ್ತಾರೆ ಅವರ ಹೆಸರು ನೆನಪಿಲ್ಲ . ನನ್ನ ತಾಯಿ ನಿಪಿ85 ಮತ್ತು 86 ರ ಪ್ರಕಾರ ಸದ್ರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಅಣ್ಣನೇ ಮಾರಾಟ ಮಾಡಿದ್ದಾನೆ ಎಂದು ತಿಳಿಸಿರುತ್ತಾರೆ. ನಾನು ಆ ಸದ್ರಿ ನಿಪಿ 85 ಮತ್ತು 86 ಕ್ರಯಪತ್ರಗಳನ್ನು ಒಪ್ಪುತ್ತೇನೆ ಆದರೇ ಅದರಲ್ಲಿ ಇರುವ ಮೊತ್ತವನ್ನು ಒಪ್ಪುವುದಿಲ್ಲ . ನಿಪಿ 85 ಮತ್ತು 86 ಕ್ರಯಪತ್ರಕ್ಕೆ ಸಂಬಂಧಪಟ್ಟ ಆಸ್ತಿಗಳಲ್ಲೂ ಕೂಡ ಪಾಲು ಕೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಮಾರಾಟ ಮಾಡಲಾಗಿದೆ, ಆದ್ದರಿಂದ ಇಲ್ಲ ಎಂದು ತಿಳಿಸಿರುತ್ತಾರೆ. ಸದ್ರಿ ಆಸ್ತಿಯನ್ನು ಕೂಡ ನನ್ನ ತಾಯಿ ಸ್ವಂತ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಕುಟುಂಬದ ಹಣದಿಂದ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. 80 ಬಡಗಬೆಟ್ಟು ದಶರಥ ನಗರದ ಆಸ್ತಿಗಳನ್ನು ಒಟ್ಟು ಕುಟುಬಂದ ನೆಲೆಯಲ್ಲಿ ಖರೀದಿಸಿದರಾ ಅಥವಾ ನಿಮ್ಮ ತಾಯಿ ಸ್ವಂತ ನೆಲೆಯಲ್ಲಿ ಖರೀದಿಸಿದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಾಯಿಯ ಹೆಸರಿನಲ್ಲಿ ಖರೀದಿಸಲಾಗಿತ್ತು ಎಂದು ತಿಳಿಸಿರುತ್ತಾರೆ. ಅದೇ ರೀತಿ ನನ್ನ ತಾಯಿಯ ಹೆಸರಿನಲ್ಲಿಯೇ ಅದು ಮಾರಾಟ ಆಗಿದೆ ಎಂದರೆ ಸರಿ. ಖರೀದಿಸಿದ ನಂತರ ಸದರಿ ಸ್ವತ್ತಿನಲ್ಲಿ ಮನೆಯನ್ನು ಕುಟುಂಬದ ಹಣದಿಂದ ನಾನೇ ನಿಂತು ಕಟ್ಟಿಸಿರುತ್ತೇನೆ. ಕುಟುಂಬದ ಹಣ ಎಂದರೆ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ flat ಗಳನ್ನು ಮಾರಾಟ ಮಾಡಿದ ಬಂದ ಹಣದಿಂದ ಮನೆಯನ್ನು ಕಟ್ಟಿಸಲಾಯಿತು. ಕಟ್ಟಡಕ್ಕೆ ಹಣವನ್ನು ಯಾವುದರಿಂದ ಕೊಡಲಾಯಿತು ಎಂದು ಕೇಳಿದ ಪ್ರಶ್ನೆಗೆ

ಸಾಕ್ಷಿ ನಾನು ಕಟ್ಟಿಸುವುದು ನನ್ನ ಅಣ್ಣ ಲೆಕ್ಕ ಇಡುವುದು ಎಂದು ತಿಳಿಸಿರುತ್ತಾರೆ. ಸದ್ರಿ ಮನೆಯನ್ನು ಕಟ್ಟಿಸುವಾಗ ಮನೆಗೆ ನನಗೆ 25 ವರ್ಷ ವಯಸ್ಸು ಆಗಿತ್ತು. ನಾನು ಹೇಳುವಂತೆ ಯಾವುದೇ ಕುಟುಂಬವಾಗಲೀ ಅಥವಾ ಕುಟುಂಬದ ಹಣವಾಗಲೀ ಹಾಕಿ ಮನೆಯನ್ನು ಕಟ್ಟಿಸಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಹಣ ಹಾಕಲಾಗಿದೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮನೆ ಕಟ್ಟಿರುವುದೇ ದಾಖಲೆ ಎಂದು ತಿಳಿಸಿರುತಾರೆ. ಕುಟುಂಬದ ಹಣದಿಂದ ಮನೆ ಕಟ್ಟಿಸಲಾಯಿತು ಮತ್ತೆ ಮಾರಾಟ ಮಾಡಲಾಯಿತು ಎಂದು ನನ್ನ ವಾದಪತ್ರದಲ್ಲಿ ಹೇಳಿಲ್ಲ ಅದರೇ ದಾಖಲೆ ಕೊಟ್ಟಿರುತ್ತೇನೆ . ದಾಖಲೆ ಎಂದರೆ ನಿಪಿ 85 ಮತ್ತು 86. ನನ್ನ ತಂದೆಯೇ ಸಾಲ ಮಾಡಿ 1974-75 ರ ಸಮಯದಲ್ಲಿ ಮನೆಯನ್ನು ದೊಡ್ಡದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಮಾಡಿದ್ದರೂ ಮಾಡಿರಬಹುದು. ಮನೆಯ ಸಾಲವನ್ನು ನನ್ನ ತಂದೆ 1994 ರಲ್ಲಿ ತೀರಿಸಿರುತ್ತಾರೆ ಎಂದರೆ ಸರಿ. ಮನೆ ಕಟ್ಟಿಸಲು ನನ್ನ ತಂದೆ ನನ್ನ ತಾಯಿಗೆ ಸೇರಿದ 65 ಪವನ್ ಚಿನ್ನದ ಸೊಂಟದ ಪಟ್ಟಿಯನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಆ ರೀತಿ ಮಾರಾಟ ಮಾಡಿದ್ದರಿಂದ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ನನ್ನ ತಾಯಿಗೆ 65 ಪವನ್ ಸೊಂಟದ ಪಟ್ಟಿಯನ್ನು ತೆಗೆಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದನ್ನು ಕುಟುಂಬದ ಹಣದಿಂದ ಮತ್ತು ಹಳೆಯ ಚಿನ್ನವನ್ನು ಮಾರಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಸಾಕ್ಷಿಗೆ ಒಂದು ಆಧಾರ್ ಕಾರ್ಡ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ಒಪ್ಪುತ್ತೇನೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದ್ರಿ ದಾಖಲೆಯನ್ನು ನಿಡಿ-9 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಆರ್ ಸಿ ಹಾಗೇ ಕಾಣುತಿದೆ ಸದ್ರಿ ವಾಹನವನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ತೆಗೆಸಿಕೊಟ್ಟಿದ್ದಾನೆ ಎಂದು ತಿಳಿಸಿರುತ್ತಾರೆ. ಸದ್ರಿ ದಾಖಲೆ ಜೆರಾಕ್ಸ್ ಆಗಿರುವುದರಿಂದ ನಿಶಾನೆಯನ್ನಾಗಿ

ಮಾಡಿರುವುದಿಲ್ಲ . ಸದ್ರಿ ವಾಹನ ಸಂಖ್ಯೆ:  ಕೆಎ 20 ಇಆರ್ 8747 ವಾಹನವನ್ನು 2023 ರಲ್ಲಿ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರಿದು ನನ್ನ ಅಣ್ಣನೇ ಫಾರಂ 29 ಮತ್ತು 30 ಕ್ಕೆ ಸಹಿ ಪಡೆದು ಮಾರಾಟ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಆರ್ ಟಿ ಒ ರವರು ಕೊಟ್ಟ ಹಿಂಬರಹವನ್ನು ನಿಡಿ 10 ಎಂದು ಗುರುತಿಸಲಾಯಿತು . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ  ಬಿ ಶೆಡೂಲ್ ಆಸ್ತಿಯಲ್ಲಿ ಒಂದನೇ ಪ್ರತಿವಾದಿ ಬೋರ್ ವೆಲ್ ತೆಗೆಸಿದ ಬಗ್ಗೆ ದಾಖಲೆ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಅವರು ಏನೂ ಬೇಕಾದರೂ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ. ಸದ್ರಿ ದಾಖಲೆಯನ್ನು ಒಪ್ಪದೇ ಇದ್ದುದರಿಂದ ನಿಶಾನೆಯನ್ನಾಗಿ ಮಾಡಿರುವುದಿಲ್ಲ. ಬೋರ್ವೆಲ್ ತೆಗೆಸಲು ನಗರಸಭೆಯಿಂದ ಕೊಟ್ಟ ನಿರಾಕ್ಷೇಪಣಾ ಪತ್ರ ಅಲ್ಲವೇ ಎಂದು ತೋರಿಸಲಾಗಿ ಸಾಕ್ಷಿ  ನಾನು ಒಪ್ಪುವುದಿಲ್ಲ ಎಂದು ತಿಳಿಸಿರುತಾರೆ. ಸದ್ರಿ ಬೋರ್ ವೆಲ್ ಗೆ ವಿದ್ಯುತ್ ಚಕ್ತಿ ಹಾಕಿಸಿದ ಬಗ್ಗೆ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಇರಬಹುದು ಎಂದು ತಿಳಿಸಿರುತಾರೆ . ಸದ್ರಿ ದಾಖಲೆಯನ್ನು  ನಿಡಿ 11 ಎಂದು ಗುರುತಿಸಲಾಯಿತು . 2019 ರಲ್ಲಿ ರೆಡಿಮೇಡ್ ಕಾಂಪಾಂಡ್ ಹಾಕಿಸಿದ ಬಗ್ಗೆರಸೀದಿ ಎಂದು ತೋರಿಸಲಾಗಿ ಸಾಕ್ಷಿ ಮೊದಲೇ ಕಾಂಪಾಂಡ್ ಇತ್ತು ಎಂದು ತಿಳಿಸಿರುತ್ತಾರೆ . ಸದ್ರಿ ರಸೀದಿಯನ್ನು ನಾನು ಒಪ್ಪುವುದಿಲ್ಲ . ಕಾಂಪಾಂಡ್ ಗೆ ಸ್ಟೀಲ್ ಗೇಟ್ ಹಾಕಿದ ಬಗ್ಗೆ ರಸೀದಿ ಎಂದು ತೋರಿಸಲಾಗಿ ಸಾಕ್ಷಿ ನೋಡಿ ರಿಪೇರಿ ಮಾತ್ರ ಮಾಡಲಾಗಿದೆ ಸದ್ರಿ ರಸೀದಿಯನ್ನು ನಾನು ಒಪ್ಪುವುದಿಲ್ಲ ಎಂದು ತಿಳಿಸಿರುತ್ತಾರೆ.

**ಈ ಹಂತದಲ್ಲಿ  ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 34/2020

ಪಿ.ಡಬ್ಲ್ಯು - 01

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.